ಚಿಕ್ಕನಾಯಕನಹಳ್ಳಿಯ ತಂಡ ರಾಷ್ಟ್ರಮಟ್ಟಕ್ಕೆ ಆಯ್ಕೆ

ತುಮಕೂರು

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ತುಮಕೂರು ಜಿಲ್ಲಾ ಸಮಿತಿ ವತಿಯಿಂದ ಜಿಲ್ಲಾ ಮಟ್ಟದ 25 ನೇ ರಾಷ್ಟ್ರೀಯ ಮಕ್ಕಳ ವಿಜ್ಞಾನ ಸಮಾವೇಶವನ್ನು ನವೆಂಬರ್ 15 ರಂದು ತುಮಕೂರಿನಲ್ಲಿ ನಡೆಸಲಾಯಿತು. ಇದರಲ್ಲಿ ಬಹಳಷ್ಟು ತಂಡಗಳು ಭಾಗವಹಿಸಿದ್ದು, ಅದರಲ್ಲಿ 8 ತಂಡಗಳು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದವು.

ನವೆಂಬರ್ 29, 30 ಹಾಗೂ ಡಿಸೆಂಬರ್ 1 ರಂದು ರಾಜ್ಯ ಮಟ್ಟದ ಸಮಾವೇಶವು ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ನಡೆಯಿತು. 34 ಜಿಲ್ಲೆಗಳಿಂದ ಸುಮಾರು 320 ತಂಡಗಳು ಭಾಗವಹಿಸಿದ್ದು, ಇದರಲ್ಲಿ 30 ತಂಡಗಳು ರಾಷ್ಟ್ರಮಟ್ಟಕ್ಕೆ ಆಯ್ಕೆಯನ್ನು ಪಡೆದವು.

ಇದರಲ್ಲಿ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಕುರುಬರಹಳ್ಳಿಯ ಹಿರಿಯ ಪ್ರಾಥಮಿಕ ಶಾಲೆಯ ತಂಡವು ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದು, ಡಿಸೆಂಬರ್ 27 ರಿಂದ 31 ರವರೆಗೆ ಅಹಮದಾಬಾದ್‌ನಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದೆ.

ತಂಡದ ನಾಯಕಿ ಸಿ.ವಿ. ಸೃಷ್ಠಿ ಹಾಗೂ ಕೆ.ಎಸ್. ಪ್ರತಿಭ, ಕೆ.ಎಸ್. ಕೀರ್ತನ, ಲತಾಮಣಿ, ಕೆ.ಆರ್. ಮೇಘನ ತಂಡದಲ್ಲಿದ್ದಾರೆ.

ತುಮಕೂರು ಜಿಲ್ಲಾಧ್ಯಕ್ಷರು ಹಾಗೂ ಜಿಲ್ಲಾ ಸಮನ್ವಯಕಾರರು ಆದ ಕ್ಯಾಲೆಂಡರ್ ಶಿವಕುಮಾರ್, ಜಿಲ್ಲಾ ಶೈಕ್ಷಣಿಕ ಸಮನ್ವಯಕಾರರಾದ ಎಂ.ಎಸ್ .ಪರಮೇಶ್ವರಯ್ಯ ಹಾಗೂ ತಂಡದ ಮಾರ್ಗದರ್ಶಿ ಶಿಕ್ಷಕಿಯಾಗಿ ಆರ್.ರೂಪ ಕಾರ್ಯನಿರ್ವಹಿಸಿರುತ್ತಾರೆ.

ತುಮಕೂರು ವಿ.ವಿ. ಎದುರಿನ ರಸ್ತೆಯಲ್ಲಿ ಹೆಚ್ಚುತ್ತಿರುವ ಅಪಘಾತಗಳು

ತುಮಕೂರು

ನಗರದ ಬಿ.ಹೆಚ್.ರಸ್ತೆಯ ತುಮಕೂರು ವಿ.ವಿ. ಎದುರು ಪದೇ ಪದೇ ಅಪಘಾತಗಳು ಸಂಭವಿಸುತ್ತಲೇ ಇವೆ. ಕಳೆದ ವಾರವಷ್ಟೇ ಇಲ್ಲಿ ಒಬ್ಬರು ಅಪಘಾತಕ್ಕೀಡಾಗಿ ಎರಡು ದಿನಗಳ ನಂತರ ಆಸ್ಪತ್ರೆಯಲ್ಲಿ ಅಸುನೀಗಿದರು. ಮೂರು ತಿಂಗಳ ಸಮಯದಲ್ಲಿ ಇದೇ ರಸ್ತೆಯಲ್ಲಿ ವಿದ್ಯಾರ್ಥಿನಿಯೊಬ್ಬರು ಆಕ್ಟೀವ್ ಹೋಂಡಾದಲ್ಲಿ ಹೋಗುತ್ತಿದ್ದಾಗ ವಾಹನವೊಂದು ಡಿಕ್ಕಿ ಹೊಡೆದು ಆಕೆಯೂ ಮೃತಪಟ್ಟ ಘಟನೆ ನಡೆದಿತ್ತು. ಹೀಗೆ ವಾರಕ್ಕೊಮ್ಮೆ ಅಪಘಾತಗಳು ಇಲ್ಲಿ ಸಂಭವಿಸುತ್ತಲೇ ಇವೆ. ಅನೇಕರು ಗಾಯಗೊಂಡು ಆಸ್ಪತ್ರೆಗಳಿಗೆ ದಾಖಲಾಗುತ್ತಿದ್ದಾರೆ.

ಜನನಿಬಿಡ ರಸ್ತೆಯಾಗಿರುವ ಈ ಭಾಗದಲ್ಲಿ ಜನತೆ ಮತ್ತು ವಾಹನಗಳ ಓಡಾಟ ಅಧಿಕವಾಗಿದೆ. ತುಮಕೂರು ವಿ.ವಿ. ಆವರಣದಿಂದ ಬಿ.ಎಚ್.ರಸ್ತೆಗೆ ಬರುವ, ಎಸ್.ಎಸ್.ಸರ್ಕಲ್‌ನಿಂದ ಬಟವಾಡಿ ಕಡೆಗೆ ಹೋಗುವ ವಾಹನಗಳು ಮತ್ತೆ ತಿರುಗಿ ಬರುವಾಗ, ಅಶೋಕ ನಗರದಿಂದ ಬರುವ ವಾಹನಗಳು ಬಿ.ಎಚ್.ರಸ್ತೆಗೆ ತಿರುಗುವಾಗ ಹೀಗೆ ಮೂರ್‍ನಾಲ್ಕು ಹಂತಗಳಲ್ಲಿ ಇಲ್ಲಿ ವಾಹನ ದಟ್ಟಣೆ ಹೆಚ್ಚಾಗಿರುತ್ತದೆ. ಅತಿ ವೇಗ ಮತ್ತು ಅಜಾಗರೂಕತೆಯಿಂದ ವಾಹನಗಳನ್ನು ಓಡಿಸುತ್ತಿದ್ದ ಪರಿಣಾಮ ಇಲ್ಲಿ ಪದೇ ಪದೇ

ಅಪಘಾತಗಳು ಸಂಭವಿಸುತ್ತಿದ್ದವು. ಇದನ್ನು ಮನಗಂಡು ಪೊಲೀಸ್ ಇಲಾಖೆಯೂ ಒಂದಷ್ಟು ಎಚ್ಚೆತ್ತುಕೊಂಡಿತ್ತು. ವಿವಿಧ ಇಲಾಖೆಗಳ ಸಹಕಾರದೊಂದಿಗೆ ಇಲ್ಲಿ ಹಂಪ್ಸ್ ಹಾಕುವ ಕಾರ್ಯ ನಡೆಯಿತು. ಆದರೆ ಸದರಿ ಹಂಪ್ಸ್‌ಗೆ ಬಣ್ಣ ಅಥವಾ ಝೀಬ್ರಾ ಕ್ರಾಸಿಂಗ್ ಮಾಡಬೇಕಾಗಿತ್ತು.

ದೋಬಿಘಾಟ್ ರಸ್ತೆ ಕಡೆಯಿಂದ, ಅಶೋಕನಗರ ಕಡೆಯಿಂದ ಬರುವ ವಾಹನಗಳು ವೇಗವಾಗಿಯೇ ಬರುತ್ತವೆ. ಹಿಂದಿನಿಂದ ವಾಹನಗಳು ಬರುತ್ತಿರುವುದನ್ನು ಗಮನಿಸದೆ ಎಡಭಾಗಕ್ಕೆ ತಿರುಗುತ್ತಾರೆ. ಇದು ಬಹಳಷ್ಟು ಅನಾಹುತಗಳಿಗೆ ಕಾರಣವಾಗುತ್ತಿವೆ.

ರಸ್ತೆ ಅಪಘಾತಗಳನ್ನು ತಪ್ಪಿಸುವ ಸಲುವಾಗಿಯೇ ಸಾರ್ವಜನಿಕರ ಓಡಾಟಕ್ಕಾಗಿ ವಿ.ವಿ. ಎದುರು ಸ್ಕೈವಾಕರ್ ನಿರ್ಮಾಣ ಮಾಡಲಾಗಿದೆ. ಆದರೆ ಯಾರೊಬ್ಬರೂ ಅದನ್ನು ಉಪಯೋಗಿಸುತ್ತಿರುವ ದೃಶ್ಯಗಳು ಕಂಡುಬರುತ್ತಿಲ್ಲ. ಇದನ್ನು ನೋಡಿದರೆ ಇಲ್ಲಿ ಸ್ಕೈವಾಕರ್ ಅವಶ್ಯಕತೆ ಇತ್ತೆ ಎನ್ನುವಂತಾಗಿದೆ. ಮೆಟ್ಟಿಲುಗಳನ್ನು ಹತ್ತಿ ಹೋಗಲಾಗದವರಿಗೆ ಲಿಫ್ಟ್ ವ್ಯವಸ್ಥೆಯನ್ನೂ ಸಹ ಇಲ್ಲಿ ಮಾಡಲಾಗಿದೆ. ಆದರೆ ಅವುಗಳು ಬಾಗಿಲು ಮುಚ್ಚಿಕೊಂಡು ಉದ್ಘಾಟನೆಗಾಗಿ ಕಾಯುತ್ತಾ ಕುಳಿತಿವೆ. ಸ್ಕೈವಾಕರ್ ಕೆಳಗಿನ ಜಾಗದಲ್ಲಿ ಹಣ್ಣಿನ ಅಂಗಡಿಗಳು ತೆರೆದುಕೊಂಡಿವೆ.

ಬಿ.ಎಚ್.ರಸ್ತೆಯಲ್ಲಿನ ಸಿದ್ದಗಂಗಾ ಬಸ್ ಸ್ಟಾಪ್, ವಿ.ವಿ. ಎದುರಿನ ರಸ್ತೆಯಲ್ಲಿ ಅಪಘಾತಗಳನ್ನು ತಪ್ಪಿಸಲು ಪೊಲೀಸ್ ಇಲಾಖೆ ನಿಗಾ ವಹಿಸಿದ್ದು ಸರಿಯಷ್ಟೆ. ಇದರ ಜೊತೆಗೆ ಮತ್ತಷ್ಟು ಸುಧಾರಣಾ ಕ್ರಮಗಳನ್ನು ಕೈಗೊಳ್ಳುವ ಅಗತ್ಯವಿದೆ. ವಿ.ವಿ. ಎದುರು ಹಂಪ್ಸ್ ಮೇಲೆ ಬಣ್ಣದ ಗುರುತು ಹಾಕುವ ಜೊತೆಗೆ ಸ್ಕೈವಾಕರ್ ಉಪಯೋಗಿಸುವಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕಿದೆ. ಅಲ್ಲದೆ ಲಿಫ್ಟ್‌ನ್ನು ಬಳಕೆಗೆ ಯೋಗ್ಯ ಮಾಡಬೇಕಿದೆ.

> ಈ ಭಾಗದಲ್ಲಿ ಪದೇ ಪದೇ ಅಪಘಾತಗಳು ಸಂಭವಿಸುತ್ತಲೇ ಇವೆ. ಪೊಲೀಸ್ ವರಿಷ್ಠಾಧಿಕಾರಿಗಳು ಇದನ್ನು ಸೂಕ್ಷ್ಮವಾಗಿ ಗಮನಿಸಿ ಏನಾದರೊಂದು ಸುಧಾರಣಾ ಕ್ರಮ ಜಾರಿಗೆ ಅವಶ್ಯಕತೆ ಇದೆ ಎನ್ನುತ್ತಾರೆ ಪ್ರೊ.ಲಿಂಗರಾಜು ಅವರು.

ನಿವೃತ್ತ ಪಿ.ಯು. ಪ್ರಾಂಶುಪಾಲರ ಸಭೆ

ತುಮಕೂರು : ನಗರದ ಎಂ.ಜಿ.ರಸ್ತೆಯಲ್ಲಿರುವ ವಿಜ್ಞಾನ ಕೇಂದ್ರದಲ್ಲಿ ಡಿ.11ರ ಸೋಮವಾರ ಮಧ್ಯಾಹ್ನ 3 ಗಂಟೆಗೆ ನಿವೃತ್ತ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರುಗಳ ಸಭೆಯನ್ನು ಕರೆಯಲಾಗಿದೆ. ಆ ದಿನದ ಸಭೆಯಲ್ಲಿ ನಿವೃತ್ತ ಪ್ರಾಂಶುಪಾಲರು ಮತ್ತು ರಾಜ್ಯ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಸಿ.ಯತಿರಾಜು, ಇನ್ನು ಉಳಿದಂತೆ ವಿಶ್ವನಾಥ, ಮರುಳಯ್ಯ, ಚಂದ್ರು, ಕರೆರಂಗನಾಯ್ಕ, ಬಿ.ವಿ.ಜನಾರ್ಧನಯ್ಯ ಹಾಗೂ ಎನ್. ನಾಗಪ್ಪ ಇನ್ನೂ ಅನೇಕ ನಿವೃತ್ತ ಪ್ರಾಂಶುಪಾಲರುಗಳು ಭಾಗವಹಿಸಲಿದ್ದಾರೆ. ಆದುರಿಂದ ಈ ಸಭೆಗೆ ಜಲ್ಲೆಯ ನಿವೃತ್ತ ಪ್ರಾಂಶುಪಾಲರು ಹಾಜರಾಗಲು ನಿ.ಪ್ರಾಂಶುಪಾಲ ಚಂದ್ರಶೇಖರ್ ತಿಳಿಸಿರುತ್ತಾರೆ.

ಓದಿರಿ ಪ್ರಜಾಪ್ರಗತಿ
ವೀಕ್ಷಿಸಿ ಪ್ರಗತಿ ಟಿವಿ

ಜಿಲ್ಲಾ ಆರೋಗ್ಯ ಮತ್ತು ಕು.ಕ.ಸಂಘ ತುಮಕೂರು (ರಿ.)
ಜಿಲ್ಲಾ ಸರ್ವೇಕ್ಷಣಾ / ಎನ್.ಸಿ.ಡಿ ಘಟಕ,ತುಮಕೂರು ಜಿಲ್ಲೆ, ತುಮಕೂರು.
ದೂರವಾಣಿ: 0816-2260594; E-Mail: ncdtumkur@gmail.com

ಸಂ : ಜಿ.ಸ.ಕ./ಎನ್.ಸಿ.ಡಿ.ಘ.ತು/ 73 /2017–18 ದಿನಾಂಕ: 29.11.2017

ಪ್ರಕಟಣೆ

ಎನ್.ಪಿ.ಸಿ.ಡಿ.ಸಿ.ಎಸ್,ಎನ್.ಪಿ.ಎಚ್.ಸಿ.ಇ, ಎನ್‌ವಿಬಿಡಿಸಿಪಿ ಮತ್ತು ಎನ್.ಪಿ.ಪಿ.ಸಿ.ಡಿ ಕಾರ್ಯಕ್ರಮದಡಿಯಲ್ಲಿ ನೇರ ಸಂದರ್ಶನದ ಮೂಲಕ ಖಾಲಿ ಇರುವ ಈ ಕೆಳಕಂಡ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ರಾಷ್ಟ್ರೀಯ ಆರೋಗ್ಯ ಅಭಿಯಾನದ ಷರತ್ತು ಮತ್ತು ನಿಬಂಧನೆಗೊಳಪಟ್ಟು ಮೀಸಲಾತಿ ಮತ್ತು ಅರ್ಹತೆಯ ಆಧಾರದ ಮೇಲೆ ಆಯ್ಕೆ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ ಸಂ.	ಹುದ್ದೆಯ ಹೆಸರು	ವಿದ್ಯಾರ್ಹತೆ	ಅನುಭವ	ಒಟ್ಟು ಹುದ್ದೆ	ಸಂಚಿತ ವೇತನ	ವಯೋಮಿತಿ
1	Specialist cardiology/ General Medicine (District CCU)	M.D in Medicine + Endocrinology Or Cardiology ಯಲ್ಲಿ ವಿಶೇಷ ತರಬೇತಿ (ಆಪೇಕ್ಷಣೀಯ)	ತಜ್ಞರಾಗಿ ಆಸ್ಪತ್ರೆಯಲ್ಲಿ 02 ವರ್ಷ ಕರ್ತವ್ಯ ನಿರ್ವಹಿಸಿದ ಅನುಭವ	01	94,500/–	50 ವರ್ಷ
2	ಜೆನರಲ್ ಫಿಜಿಷಿಯನ್ (ಜಿಲ್ಲಾ ಎನ್.ಸಿ.ಡಿ. ಕ್ಲಿನಿಕ್)	ಎಂಡಿ ಇನ್ ಜೆನರಲ್ ಮೆಡಿಸಿನ್	ಯಾವುದಾದರೂ ಆಸ್ಪತ್ರೆಯಲ್ಲಿ 03 ವರ್ಷ ಕರ್ತವ್ಯ ನಿರ್ವಹಿಸಿದ ಅನುಭವ.	01	73,500/–	40 ವರ್ಷ
3	ಕನ್ಸಲೆಂಟ್ ಮೆಡಿಸನ್ ಎನ್.ಪಿ.ಎಚ್.ಸಿ.ಇ ಜಿಲ್ಲಾ ಘಟಕ	ಎಂ.ಡಿ. (M.D) ಇನ್ ಜನರಲ್ ಮೆಡಿಸಿನ್ ಅಥವಾ ಎಮ್.ಬಿ.ಬಿ.ಎಸ್	ತಜ್ಞರಾಗಿ ಆಸ್ಪತ್ರೆಯಲ್ಲಿ 02 ವರ್ಷ ಕರ್ತವ್ಯ ನಿರ್ವಹಿಸಿದ ಅನುಭವ.	02	50,000/– (ಎಂಡಿ) 44,000/– (ಎಮ್.ಬಿ.ಬಿ.ಎಸ್.)	50 ವರ್ಷ
4	ಸಾಮಾನ್ಯ ಕರ್ತವ್ಯ ವೈದ್ಯರು (ಸಮುದಾಯ ಆರೋಗ್ಯ ಕೇಂದ್ರಕ್ಕೆ)ಎನ್.ಸಿ.ಡಿ ವಿಭಾಗ	ಎಮ್.ಬಿ.ಬಿ.ಎಸ್.	ಯಾವುದಾದರು ಆಸ್ಪತ್ರೆಯಲ್ಲಿ 02 ವರ್ಷ ಕರ್ತವ್ಯ ನಿರ್ವಹಿಸಿದ ಅನುಭವ.	08	44,000/–	40 ವರ್ಷ
5	ಶುಶ್ರೂಷಕಿಯರು – 01 ಜಿಲ್ಲಾ ಆಸ್ಪತ್ರೆಗೆ–01(ಸಿಸಿಯು) ಸಾ. ಆಸ್ಪತ್ರೆ –01 ಮತ್ತು ಸ.ಆ.ಕೇಂದ್ರಕ್ಕೆ –01 (ತುರುವೇಕೆರೆ, ವೈ.ಎನ್.ಹೊಸಕೋಟೆ) ಮೀಸಲಾತಿ–1) 3 B ಮ.ಅ–01,2)2 B ಮ.ಅ–01, 3)ಪ.ಜಾ ಸಾಮಾನ್ಯ–01	ಬಿ.ಎಸ್.ಸಿ.ನರ್ಸಿಂಗ್ (ಆಪೇಕ್ಷಣೀಯ) / ಡಿಪ್ಲೋಮ ನರ್ಸಿಂಗ್	02 ವರ್ಷ ಕರ್ತವ್ಯ ನಿರ್ವಹಿಸಿದ ಅನುಭವ.	03	10,000/–	40ವರ್ಷ
6	ಪ್ರಯೋಗ ಶಾಲಾ ಟೆಕ್ನಾಲಾಜಿಸ್ಟ್–(**ಸಾ ಆಸ್ಪತ್ರೆ ಚಿ.ನಾ.ಹಳ್ಳಿಗೆ)ಮೀಸಲಾತಿ – 1)2–A– ಮ ಅ–01**	ಪಿ.ಯು.ಸಿ + ಡಿ.ಎಂ.ಎಲ್.ಟಿ.	02 ವರ್ಷ ಕರ್ತವ್ಯ ನಿರ್ವಹಿಸಿದ ಅನುಭವ ಮತ್ತು ಕಂಪ್ಯೂಟರ್ ಜ್ಞಾನ.	01	13,200/–	40 ವರ್ಷ
7	ಕೌನ್ಸಿಲರ್(ಸಮುದಾಯ ಆರೋಗ್ಯ ಕೇಂದ್ರಕ್ಕೆ) **–ಮೀಸಲಾತಿ–** **1)2–A- ಮ ಅ–02** **2)ಪ.ಜಾ–ಗ್ರಾ.ಅ–01** 3)ಪ್ರ.ವ– I ಮ.ಅ –01	ಸೊಷಿಯಲ್ ಸೈನ್ಸ್‌ನಲ್ಲಿ ಪದವಿ /ಡಿಪ್ಲೋಮ ಇನ್ ಕೌನ್ಸಲಿಂಗ್/ ಆರೋಗ್ಯ ಶಿಕ್ಷಣ/ ಸಮೂಹ ಸಂವಹನ	ಆರೋಗ್ಯ ಕ್ಷೇತ್ರದಲ್ಲಿ 02 ವರ್ಷ ಕರ್ತವ್ಯ ನಿರ್ವಹಿಸಿದ ಅನುಭವ.	04	13,200/–	40 ವರ್ಷ
8	Rehabilitation Worker **ಮೀಸಲಾತಿ–** 1))ಪ್ರ.ವ–I ಮ.ಅ –01 2) ಪ.ಜಾ–ಮ.ಅ–01, ಗ್ರಾ.ಅ–01, 3)ಪ.ಪಂ–ಮ.ಅ–01, 4) **2–A– ಮಅ–01** 5) ಸಾಮಾನ್ಯ–02	One year certificate course/ Diploma in multi Rehabilitation worker Or B.P.T	ಆಸ್ಪತ್ರೆಯಲ್ಲಿ 01 ವರ್ಷ ಕರ್ತವ್ಯ ನಿರ್ವಹಿಸಿದ ಅನುಭವ.	07	15,000/–	40 ವರ್ಷ
9	ಫೈನಾಷಿಯಲ್ & ಲಾಜಿಸ್ಟಿಕ್ ಅಸಿಸ್ಟಂಟ್ (ಎನ್‌ವಿಬಿಡಿಸಿಪಿ ಕಾರ್ಯಕ್ರಮದಡಿಯಲ್ಲಿ ಅರ್ಹತೆಯ ಮತ್ತು ಅನುಭವದ ಆಧಾರದ ಮೇಲೆ ಆಯ್ಕೆ)	ವಾಣಿಜ್ಯ ಶಾಸ್ತ್ರದಲ್ಲಿ ಪದವೀಧರರಾಗಿರಬೇಕು	ಲೆಕ್ಕ ಪರಿಶೋಧನೆ, ವಿಶ್ಲೇಷಣೆ, ಬಜೆಟ್, ಹಣಕಾಸು ಸಾಫ್ಟ್‌ವೇರ್ ವರದಿ ಮಾಡುವ ವ್ಯವಸ್ಥೆಗಳು, ಕಂಪ್ಯೂಟರ್ ಮತ್ತು ಟ್ಯಾಲಿಯ ಅನುಭವವಿರಬೇಕು. ಸರ್ಕಾರಿ ಸಂಸ್ಥೆಗಳಲ್ಲಿ ಕನಿಷ್ಠ 2 ವರ್ಷಗಳ ಅನುಭವವಿರಬೇಕು.	01	15,000/–	40 ವರ್ಷ
10	Audiologist -**ಮೀಸಲಾತಿ** - GM – OTHERS (ಎನ್.ಪಿ.ಪಿ.ಸಿ.ಡಿ ಕಾರ್ಯಕ್ರಮದಡಿಯಲ್ಲಿ)	Bachelor in Audiology & Spech Language Pathology / B.Sc. from RCI recognized institute.	At least One Year Experience.	01	30,000/–	40 ವರ್ಷ
11	Audiometric Assistant-**ಮೀಸಲಾತಿ**-GM-OTHERS (ಎನ್.ಪಿ.ಪಿ.ಸಿ.ಡಿ ಕಾರ್ಯಕ್ರಮದಡಿಯಲ್ಲಿ)	Technical Person with one year diploma in Hearing Language and Speech (DHLS) from a RCI recognized Institute.	At least One Year Experience.	01	15,000/–	40 ವರ್ಷ

ಆಸಕ್ತಿ ಹೊಂದಿದ ಅರ್ಹ ಅಭ್ಯರ್ಥಿಗಳು ಜಿಲ್ಲಾ ಸರ್ವೆಲೆನ್ಸ್ ಅಧಿಕಾರಿಗಳ ಕಛೇರಿ, ಜಿಲ್ಲಾ ಆರೋಗ್ಯ ಮತ್ತು ಕು.ಕ ಅಧಿಕಾರಿಗಳ ಕಛೇರಿ ಸಂಕೀರ್ಣ, 1ನೇ ಮಹಡಿ ರೂಮ್ ನಂಬರ್ 203 ಅಮಾನಿಕೆರೆ ಪಾರ್ಕ್ ಎದುರು, ತುಮಕೂರು ಇಲ್ಲಿ ನಡೆಯುವ ನೇರ ಸಂದರ್ಶನಕ್ಕೆ ಸಂಬಂಧಪಟ್ಟ ಆಸಕ್ತ ಅಭ್ಯರ್ಥಿಗಳು ಅವಶ್ಯಕ ಪೂರಕ ದಾಖಲೆಗಳೊಂದಿಗೆ (ವಿದ್ಯಾರ್ಹತೆ, ಗ್ರಾಮೀಣ, ಕನ್ನಡ ಮಾಧ್ಯಮ, ಜಾತಿ ಪ್ರಮಾಣ ಪತ್ರ) ಮೂಲ ಮತ್ತು ನಕಲು ಪ್ರತಿಗಳೊಂದಿಗೆ **ದಿನಾಂಕ: 13.12.2017 ರಂದು** ನೇರ ಸಂದರ್ಶನಕ್ಕೆ ಹಾಜರಾಗಲು ಆಹ್ವಾನಿಸಿದೆ. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ವಿಳಾಸವನ್ನು ಸಂಪರ್ಕಿಸಿ.

ಸೂಚನೆ: 1) ಮೀಸಲಾತಿ ಅಭ್ಯರ್ಥಿಗಳು ಲಭ್ಯವಿಲ್ಲದ ಪಕ್ಷದಲ್ಲಿ ಮುಂದಿನ ಮೀಸಲಾತಿ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು. 2) ಅರ್ಜಿ ನಮೂನೆಯನ್ನು **ಬೆಳಗ್ಗೆ 10.00 ಗಂಟೆಯಿಂದ 01:00 ಗಂಟೆಗೆ** ನಿಗದಿತ ಅರ್ಜಿ ನಮೂನೆ ಪಡೆದುಕೊಳ್ಳವುದು ತದನಂತರ ಬಂದ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– ಸದಸ್ಯ ಕಾರ್ಯದರ್ಶಿ, ಜಿಲ್ಲಾ ಆಯ್ಕೆ ಸಮಿತಿ ಎನ್.ಪಿ.ಸಿ.ಡಿ.ಸಿ.ಎಸ್./ಎನ್.ಪಿ.ಎಚ್.ಸಿ.ಇ, ತುಮಕೂರು ಜಿಲ್ಲೆ, ತುಮಕೂರು.

ವಾ.ಸಾ.ಇ./ ತುಮಕೂರು/ 12/ ಎಂಸಿಎ/ 2017–18

ಫಲಿತಾಂಶ ಏರಿಕೆಗೆ 8 ಅಂಶಗಳ ಕ್ರಿಯಾಯೋಜನೆ

>>> 1ನೇ ಪುಟದಿಂದ...

ಫಲಿತಾಂಶ ಏರಿಕೆಯ ಜವಾಬ್ದಾರಿಯನ್ನು ನೀಡಿದೆ. ಜಿಲ್ಲೆಯಲ್ಲಿ ಶೈಕ್ಷಣಿಕ ಬಲವರ್ಧನೆಗಾಗಿ ವಿಶೇಷ ಉಪನ್ಯಾಸಗಳನ್ನು ಶಿಕ್ಷಣ ತಜ್ಞರಿಂದ ನೀಡಲಾಗುತ್ತಿದೆ. ಶೇಕಡಾ 70 ಕ್ಕಿಂತ ಕಡಿಮೆ ಫಲಿತಾಂಶ ಬಂದಿರುವ ಶಾಲೆಗಳ ಮುಖ್ಯ ಶಿಕ್ಷಕರು ಹಾಗೂ ಸಹಶಿಕ್ಷಕರನ್ನು ಸೇರಿಸಿ ಸಭೆಯನ್ನು ಏರ್ಪಡಿಸಲಾಗಿದೆ.

■ ಅಧಿಕಾರಿಗಳಿಗೆ ಶಾಲೆಗಳ ದತ್ತು

ಶಿಕ್ಷಕರ ಕರ್ತವ್ಯದ ಚಾರ್ಟ್, ಸ್ವಯಂ ಮೌಲ್ಯಮಾಪನ, ಶಿಕ್ಷಕರ ವೃತ್ತಿ ನೈಪುಣ್ಯತೆ, ತ್ರೈಮಾಸಿಕ ಸಭೆಗಳ ಕ್ರಿಯಾಯೋಜನೆ, ಶಿಕ್ಷಕರ ವೈಯಕ್ತಿಕ ಕ್ರಿಯಾಯೋಜನೆ, ಸ್ಥಳೀಯ ಸಂಪನ್ಮೂಲಗಳ ಬಳಕೆ, ಸಾಧಕರೊಂದಿಗೆ ಸಂವಾದ ಮತ್ತು ವಿದ್ಯಾರ್ಥಿ ಕೃತಿ ಸಂಪುಟ ಎಂಬ 8 ಅಂಶಗಳ ಕ್ರಿಯಾ ಯೋಜನೆಯನ್ನು ತಯಾರಿಸಿ, ಎಲ್ಲಾ ಮುಖ್ಯ ಶಿಕ್ಷಕರಿಗೆ ನೀಡಿ ಅದರಂತೆ ಅನುಷ್ಠಾನ ಮಾಡಲು ಮಾರ್ಗದರ್ಶನ ನೀಡಲಾಗಿದೆ ಎಂದು ಉಪನಿರ್ದೇಶಕ ಮಂಜುನಾಥ್ ಮಾಹಿತಿ ನೀಡಿದ್ದಾರೆ.

ಶೇಕಡಾ 50 ಕ್ಕಿಂತ ಕಡಿಮೆ ಫಲಿತಾಂಶ ಬಂದಿರುವ ಶಾಲೆಗಳನ್ನು ಜಿಲ್ಲಾಮಟ್ಟದ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ದತ್ತು ನೀಡಿ ಶೈಕ್ಷಣಿಕ ವರ್ಷದಲ್ಲಿ ನಿಯಮಿತವಾಗಿ ಭೇಟಿ ನೀಡುವುದರ ಮೂಲಕ ಶೈಕ್ಷಣಿಕ ಚಟುವಟಿಕೆಗಳನ್ನು ಪರಿಶೀಲಿಸಿ ಮಾರ್ಗದರ್ಶನ ಮಾಡುವಂತೆ ಸೂಚನೆ ನೀಡಲಾಗಿದೆ. ತಾಲ್ಲೂಕು ಹಂತದಲ್ಲಿ ಶಾಲಾ ಮುಖ್ಯಸ್ಥರು ಹಾಗೂ ಸಹಶಿಕ್ಷಕರ ಸಭೆಯನ್ನು ಶನಿವಾರ ಶಾಲಾ ಅವಧಿಯ ನಂತರ ಏರ್ಪಡಿಸಿ ಫಲಿತಾಂಶ ಉತ್ತಮಪಡಿಸಲು ಮುಖ್ಯ ಶಿಕ್ಷಕರು ಮತ್ತು ಸಹಶಿಕ್ಷಕರು ಕೈಗೊಂಡಿರುವ ಕ್ರಮಗಳ ಬಗ್ಗೆ ಪರಿಶೀಲನೆ ಮಾಡಲಾಗುತ್ತಿದೆ.

■ ಶಾಲೆಗಳ ತಪಾಸಣೆಗೆ ತಂಡ ರಚನೆ

ಜಿಲ್ಲೆಯಲ್ಲಿ ಈ ವರ್ಷದ ಏಪ್ರಿಲ್ ಪರೀಕ್ಷೆಯಲ್ಲಿ 25 ಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು ಅನುತ್ತೀರ್ಣರಾಗಿರುವ ಪ್ರೌಢಶಾಲಾ ಮುಖ್ಯ ಶಿಕ್ಷಕರಿಗೆ ಹಾಗೂ ಉಪನಿರ್ದೇಶಕರಿಗೆ,ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮತ್ತು ವಿಷಯ ಪರಿವೀಕ್ಷಕರಿಗೆ ಒಂದು ದಿನದ ಕಾರ್ಯಾಗಾರವನ್ನು ಗುಣಾತ್ಮಕ ಶಿಕ್ಷಣದ ಸೂಚ್ಯಂಕಗಳ ಬಗ್ಗೆ ನೀಡಲಾಗಿದೆ. ಪ್ರತಿ ತಿಂಗಳು 20 ಅಂಕಗಳಿಗೆ ಮೌಲ್ಯಮಾಪನ ಮಾಡಿ ಅದನ್ನು ತಂತ್ರಾಂಶದಲ್ಲಿ ಅಳವಡಿಸುಚವಂತೆ ಸೂಚಿಸಲಾಗಿದ್ದು, ಅನುದಾನಿತ ಮತ್ತು ಸರ್ಕಾರಿ ಪ್ರೌಢಶಾಲೆಗಳ ತಪಾಸಣೆಗೆ ವಿವಿಧ ಹಂತದ ಅಧಿಕಾರಿಗಳ ತಂಡಗಳನ್ನು ರಚಿಸುವ ಮುಂದಾಲೋಚನೆಯೂ ಜಿಲ್ಲಾ ಪಂಚಾಯಿತಿಯ ಮುಂದಿದೆ.

ವಿಷಯವಾರು ಶಿಕ್ಷಕರನ್ನೊಳಗೊಂಡ ತಜ್ಞರ ತಂಡದಿಂದ ಫಲಿತಾಂಶ ಉತ್ತಮಪಡಿಸಲು ವಿಷಯವಾರು ಕೈಪಿಡಿ ಸಿದ್ಧಪಡಿಸಲು ಇಲಾಖೆ ಯೋಜಿಸಿದೆ.

ಶಿಕ್ಷಕರಿಗೆ ವಿಷಯವಾರು ತಾಲ್ಲೂಕುವಾರು ಕಾರ್ಯಾಗಾರಗಳನ್ನು ಏರ್ಪಡಿಸಿ ಪಠ್ಯದಲ್ಲಿ ಕ್ಲಿಷ್ಟಾಂಶಗಳ ಬಗ್ಗೆ ಚರ್ಚಿಸಿ, ಸಂಪನ್ಮೂಲ ವ್ಯಕ್ತಿಗಳ ಮೂಲಕ ಸರಳೀಕರಣಗೊಳಿಸಲು ಹಾಗೂ ಫಲಿತಾಂಶವನ್ನು ಉತ್ತಮಪಡಿಸಲು ಕಾರ್ಯತಂತ್ರಗಳನ್ನು ಸಮಾಲೋಚಿಸಲಾಗುತ್ತಿದೆ. ಮುಂಬರುವ ಫೆಬ್ರವರಿ ತಿಂಗಳಿನಲ್ಲಿಯೇ ಪೂರ್ವ ಸಿದ್ಧತಾ ಪರೀಕ್ಷೆಗಳನ್ನು ನಡೆಸಿ ಫಲಿತಾಂಶದ ಆಗುಹೋಗುಗಳನ್ನು ವಿಶ್ಲೇಷಿಸುವ ಆಲೋಚನೆಯೂ ಇಲಾಖೆಯ ಮುಂದಿದೆ ಎಂಬ ಮಾಹಿತಿ ಇಲಾಖೆಯ ಮೂಲಗಳಿಂದ ದೊರೆತಿದೆ.

ಇವೆಲ್ಲಾ ಕಸರತ್ತುಗಳೂ ಮುಂಬರುವ ಹತ್ತನೇ ತರಗತಿಯ ಫಲಿತಾಂಶದ ಮೇಲೆ ಯಾವ ರೀತಿಯ ಪರಿಣಾಮವನ್ನು ಬೀರುತ್ತವೆ ಮತ್ತು ಎಷ್ಟರಮಟ್ಟಿಗೆ ಯಶಸ್ವಿಯಾಗುತ್ತವೆ ಎಂಬುದನ್ನು ಕಾದುನೋಡಬೇಕಿದೆ.

ಅಂಬೇಡ್ಕರ್ ಪರಿನಿರ್ವಾಣ ಕಾರ್ಯಕ್ರಮ ಆಚರಣೆ

ತಿಪಟೂರು

ನಗರದಲ್ಲಿ ಅದ್ದೂರಿಯಾಗಿ ಅಂಬೇಡ್ಕರ್ ಮಹಾಪರಿನಿರ್ವಾಣ ಕಾರ್ಯಕ್ರಮ ಆಚರಿಸಲಾಯಿತು. ನಗರದ ಪ್ರವಾಸಿ ಮಂದಿರದಲ್ಲಿ ನಡೆದ ಕಾರ್ಯಕ್ರಮವನ್ನು ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಲಾಯಿತು.

ನಂತರಮಾತನಾಡಿದತಿಪಟೂರುನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ.ಬಿ.ಶಶಿಧರ್, ಅಂಬೇಡ್ಕರ್ ಬರೆದಿರುವ ಸಂವಿಧಾನ ವಿಶ್ವ ಶ್ರೇಷ್ಠವಾದುದು. ಇಂದಿನ ದಿನಮಾನಗಳಲ್ಲಿ ಬುದ್ಧ, ಬಸವ, ಅಂಬೇಡ್ಕರ್, ಗಾಂಧೀಜಿಯವರ ಚಿಂತನೆಗಳು ಪ್ರಸ್ತುತವಾಗಿವೆ. ದಲಿತರು ಸ್ವಾಭಿಮಾನದ ಬದುಕು ರೂಪಿಸಿಕೊಂಡಾಗ ಅಂಬೇಡ್ಕರ್ ಶೋಷಿತ ವರ್ಗದ ಶ್ರಮ ಸಾರ್ಥಕವಾಗುತ್ತದೆ ಎಂದ ಅವರು ಇಡೀ ದೇಶಕ್ಕೆ ಸಂವಿಧಾನವೇ ಸಮಾನತೆಯ ಧರ್ಮ ಗ್ರಂಥವಾಗಿದೆ ಎಂದವರು ವಿವರಿಸಿದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ದಲಿತ ಮುಖಂಡ ಈಚನೂರು ಮಹದೇವ್ ಮಾತನಾಡಿ ದಲಿತರು ರಾಜಕೀಯ ಪಕ್ಷಗಳ ದಾಳಗಳಾಗಬಾರದು. ಒಗ್ಗಟ್ಟಿನಿಂದ ಇದ್ದಾಗ ತಮ್ಮ ಸವಲತ್ತು ಪಡೆಯಲು ಸಾಧ್ಯ. ದಲಿತರು ಶಿಕ್ಷಣ ಸಂಘಟನೆ, ಹೋರಾಟದ ಜೊತೆಗೆ ಸ್ವಾಭಿಮಾನದ ಬದುಕಿಗೆ ಮುಖ್ಯವಾಗಿ ಬೇಕಾಗುವ ಸ್ವಯಂ ಉದ್ಯೋಗ ರೂಢಿಸಿಕೊಳ್ಳಬೇಕು ಎಂದರು. ಕಾರ್ಯಕ್ರಮದಲ್ಲಿ ತಾಲ್ಲೂಕು ಕಾರ್ಮಿಕ ಒಕ್ಕೂಟದ ಅಧ್ಯಕ್ಷ ಗ್ಯಾರಘಟ್ಟ ಹೊನ್ನಪ್ಪ, ಮಾದಿಗ ದಂಡೋರ ಅಧ್ಯಕ್ಷ ಕುಪ್ಪಾಳು ರಂಗಸ್ವಾಮಿ, ಟಿಕೆ. ಕುಮಾರ್, ಮೈನ್ಸ್ ಬಸವರಾಜು, ಕಂಚಾಘಟ್ಟ ರಘು, ಕೃಷ್ಣಮೂರ್ತಿ, ಲೋಹಿತ್, ಗಾಂಧಿನಗರ ಬಸವರಾಜು ಮುಂತಾದವರು ಉಪಸ್ಥಿತರಿದ್ದರು.

> ದಲಿತರು ರಾಜಕೀಯ ಪಕ್ಷಗಳ ದಾಳಗಳಾಗಬಾರದು. ಒಗ್ಗಟ್ಟಿನಿಂದ ಇದ್ದಾಗ ತಮ್ಮ ಸವಲತ್ತು ಪಡೆಯಲು ಸಾಧ್ಯ. ದಲಿತರು ಶಿಕ್ಷಣ ಸಂಘಟನೆ, ಹೋರಾಟದ ಜೊತೆಗೆ ಸ್ವಾಭಿಮಾನದ ಬದುಕಿಗೆ ಮುಖ್ಯವಾಗಿ ಬೇಕಾಗುವ ಸ್ವಯಂ ಉದ್ಯೋಗ ರೂಢಿಸಿಕೊಳ್ಳಬೇಕು

ತಾ.ಪಂ. ಮಾಜಿ ಅಧ್ಯಕ್ಷ ನಿಧನ

ಶಿರಾ

ತಾಲ್ಲೂಕು ಪಂಚಾಯ್ತಿಯ ಮಾಜಿ ಅಧ್ಯಕ್ಷರು ಹಾಗೂ ಜೆ.ಡಿ.ಎಸ್. ಪಕ್ಷದ ಹಿರಿಯ ಮುಖಂಡರಾದ ದೊಡ್ಡ ಅಗ್ರಹಾರದ ಚಂದ್ರಯ್ಯ ಅವರು ಮಂಗಳವಾರ ಸಂಜೆ ನಿಧನರಾದರು.

83 ವರ್ಷದ ಚಂದ್ರಯ್ಯ ತಾ.ಪಂ. ಅಧ್ಯಕ್ಷರಾಗಿದ್ದಾಗ ಇಲಾಖೆಯ ಅಧಿಕಾರಿಗಳ ಮೇಲೆ ಹಿಡಿತ ಇಟ್ಟುಕೊಂಡು ಪ್ರಾಮಾಣಿಕ ಸೇವೆಯನ್ನು ಸಲ್ಲಿಸಿದ್ದರಲ್ಲದೆ, ಜೆ.ಡಿ.ಎಸ್. ಪಕ್ಷದಲ್ಲಿ ಪ್ರಭಾವಿ ಮುಖಂಡರೂ ಆಗಿದ್ದರು.

ಮಂಗಳವಾರ 4 ಗಂಟೆಗೆ ದೈವಾದೀನರಾದ ಅವರ ಅಂತ್ಯಕ್ರಿಯೆಯನ್ನು ಬುಧವಾರ ಮಧ್ಯಾಹ್ನ ದೊಡ್ಡ ಅಗ್ರಹಾರ ಗ್ರಾಮದಲ್ಲಿ ನೆರವೇರಿಸಲಾಯಿತು. ಜೆ.ಡಿ.ಎಸ್. ಪಕ್ಷದ ಮುಖಂಡರು ಸೇರಿದಂತೆ ವಿವಿಧ ಜನಪ್ರತಿನಿಧಿಗಳು ಅಂತ್ಯ ಸಂಸ್ಕಾರದಲ್ಲಿ ಪಾಲ್ಗೊಂಡರು.

ಜಿಲ್ಲಾ ಪಂಚಾಯತ್: ತುಮಕೂರು ಕರ್ನಾಟಕ ಸರ್ಕಾರ ತಾಲ್ಲೂಕು ಪಂಚಾಯತ್: ತುಮಕೂರು

ಮಲ್ಲಸಂದ್ರ ಗ್ರಾಮ ಪಂಚಾಯಿತಿ ಕಾರ್ಯಾಲಯ

ಕಸಬಾ ಹೋಬಳಿ, ತುಮಕೂರು ತಾಲ್ಲೂಕು.

ಬಹಿರಂಗ ಹರಾಜು ಇಸ್ತಿಹಾರ್

ಈ ಮೂಲಕ ಸಮಸ್ತ ನಾಗರೀಕರಿಗೆ ತಿಳಿಯಪಡಿಸುವುದೇನೆಂದರೆ ಮಲ್ಲಸಂದ್ರ ಗ್ರಾಮ ಪಂಚಾಯ್ತಿ ಈ ಕೆಳಕಂಡ ಅಂಗಡಿ ಮಳಿಗೆಗಳ ಬಾಬ್ತುಗಳಿಗೆ ದಿನಾಂಕ 13-12-2017 ರಿಂದ 31-03-2020 ರವರೆಗೆ ರೂಢಿಸಿಕೊಳ್ಳುವ ಹಕ್ಕನ್ನು ದಿನಾಂಕ 13-12-2017, ಬುಧವಾರ ಬೆಳಗ್ಗೆ10-00 ಗಂಟೆಗೆ ಆಸಕ್ತಿಯುಳ್ಳವರು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಹರಾಜಿನಲ್ಲಿ ಭಾಗವಹಿಸಿ ಬಾಬ್ತುಗಳನ್ನು ಪಡೆಯಬಹುದು.

ಕ್ರ.ಸಂ.	ಬಾಬ್ತುಗಳು	ಠೇವಣಿ ಟೆಂಡರ್
01	ಮಲ್ಲಸಂದ್ರ ಗ್ರಾಮ ಪಂಚಾಯ್ತಿಯ ಈ ಕೆಳಕಂಡ ಅಂಗಡಿಯ ಅಳತೆ: 1) 13X17 ಅಡಿ, 2) 13X12 ಅಡಿ, 3) 12X8 ಅಡಿ, 4) 8X13 ಅಡಿಗಳು ಉಳ್ಳ ನಾಲ್ಕು ಅಂಗಡಿ ಮಳಿಗೆಗಳು	10,000/- (ಒಂದು ಅಂಗಡಿ ಮಳಿಗೆಗೆ ಮಾತ್ರ)

ಷರತ್ತುಗಳು: 1) ಹರಾಜಿನಲ್ಲಿ ಭಾಗವಹಿಸುವವರು ಪ್ರಾಪ್ತ ವಯಸ್ಕರಾಗಿರಬೇಕು. 2) ಗ್ರಾಮ ಪಂಚಾಯ್ತಿಗೆ ಯಾವುದೇ ತರಹದ ಬಾಕಿದಾರರಾಗಿದ್ದಲ್ಲಿ ಟೆಂಡರ್‌ನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. 3) ಗ್ರಾಮ ಪಂಚಾಯ್ತಿಯಿ ಅಂಗಡಿ ಮಳಿಗೆಗಳನ್ನು ಈ ಹಿಂದೆ ಬಾಡಿಗೆ ಪಡೆದಿರುವವರು ಬಾಡಿಗೆ ಹಣ ಪಾವತಿಸದೇ ಸುಸ್ತಿದಾರ ರಾಗಿದ್ದಲ್ಲಿ ಹರಾಜಿನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. 4) ಹರಾಜಿ ನಲ್ಲಿ ಭಾಗವಹಿಸುವವರು ಹರಾಜು ಪ್ರಾರಂಭವಾಗುವ ಮುನ್ನ ಆಯಾ ಬಾಬ್ತುಗಳಿಗೆ ನಿಗದಿಪಡಿಸಿದ ಠೇವಣಿಯನ್ನು ನಗದು ಪಾವತಿಸಿ ಅಧ್ಯಕ್ಷರು ಅಥವಾ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಯವರಿಂದ ರಸೀತಿ ಪಡೆದು ಠೇವಣಿಯನ್ನು ಸಲ್ಲಿಸಿ ಖುದ್ದಾಗಿ ಬಿಡ್ ಸವಾಲು ಮೂಲಕ ಹರಾಜಿನಲ್ಲಿ ಭಾಗವಹಿಸಿ ಹಕ್ಕನ್ನು ಪಡೆದುಕೊಳ್ಳಬೇಕು ಮತ್ತು ಹರಾಜು ಬಿಡ್ ಮಾಡುವವರು ರೂ.100 ದರದಲ್ಲಿ ಹೆಚ್ಚು ಬಿಡ್ ಮಾಡಬೇಕು. 5) ಯಶಸ್ವಿ ಬಿಡ್‌ದಾರನ ಠೇವಣಿಯನ್ನು ಬಿಟ್ಟು ಉಳಿದ ಬಿಡ್‌ದಾರರಿಗೆ ಠೇವಣಿಯನ್ನು ಹರಾಜು ಮುಗಿದ ಕೂಡಲೇ ವಾಪಸ್ ಕೊಡಲಾಗುವುದು. 6) ಹರಾಜು ಸಮಯದಲ್ಲಿ ಯಾವುದೇ ಕಾರಣವನ್ನು ಕೊಡದೇ ಹರಾಜನ್ನು ತಿರಸ್ಕರಿಸುವ ಹಾಗೂ ಯಾವುದೇ ಸಂದರ್ಭದಲ್ಲಿ ಯಾವುದೇ ರೀತಿಯ ಷರತ್ತನ್ನು ಹೊಸದಾಗಿ ವಿಧಿಸುವ ಅಧಿಕಾರವನ್ನು ಹರಾಜು ಮಾಡುವ ಅಧಿಕಾರಿಗೆ ಇರುವುದು. ಈ ರೀತಿಯಾಗಿ ವಿಧಿಸುವ ಷರತ್ತುಗಳಿಗೆ ಬದ್ದವಾಗಿರತಕ್ಕದ್ದು. 7) ಯಶಸ್ವಿ ಬಿಡ್‌ದಾರನು ಹರಾಜು ಮುಗಿದ ನಂತರ ಆಖೈರು ಬಿಡ್ ಮೊಬಲಗಿನ ಪೂರ್ಣ ಮೊತ್ತವನ್ನು ಸ್ಥಳದಲ್ಲಿಯೇ ಪಾವತಿಸುವುದು. ತಪ್ಪಿದಲ್ಲಿ ಆ ದಿನವೇ ಮರು ಹರಾಜು ನಡೆಸಲಾಗುವುದು ಮತ್ತು ಮೊದಲನೆ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಮತ್ತು ಮರು ಹರಾಜಿನಿಂದ ಗ್ರಾಮ ಪಂಚಾಯ್ತಿಗೆ ನಷ್ಟ ಉಂಟಾದಲ್ಲಿ ಆ ನಷ್ಟವನ್ನು ಮೊದಲನೆ ಬಿಡ್‌ದಾರರಿಂದ ಕಂದಾಯ ರೂಪದಲ್ಲಿ ವಸೂಲಿ ಮಾಡಲಾಗುವುದು. ಒಂದು ವೇಳೆ ಗ್ರಾಮ ಪಂಚಾಯ್ತಿಗೆ ಲಾಭ ಬಂದಲ್ಲಿ ಲಾಭಾಂಶವನ್ನು ಮೊದಲನೆ ಬಿಡ್‌ದಾರರಿಗೆ ಯಾವುದೇ ಹಕ್ಕು ಇರುವುದಿಲ್ಲ. 8) ಯಶಸ್ವಿ ಬಿಡ್‌ದಾರನು ದಿನಾಂಕ 13-12-2017 ರಿಂದ 31-03-2020 ರವರೆಗೆ ಹರಾಜು ನಿಬಂಧನೆಗಳ ರೀತ್ಯಾ ಹರಾಜಿನಲ್ಲಿ ನಿಗದಿಪಡಿಸಿರುವ ಮಾಸಿಕ ಬಾಡಿಗೆಯನ್ನು ಪ್ರತಿ ತಿಂಗಳು ತಪ್ಪದೇ ಪಾವತಿಸಿ ರಸೀತಿಯನ್ನು ಗ್ರಾಮ ಪಂಚಾಯ್ತಿಯ ಮೊಹರು ಹಾಕಿಸಿಕೊಳ್ಳತಕ್ಕದ್ದು.10) ಗ್ರಾಮ ಪಂಚಾಯ್ತಿ ಅಧಿಕಾರಿಗಳಿಗೆ ಬಾಬ್ತುಗಳ ಬಗ್ಗೆ (ಬಾಡಿಗೆ) ವಸೂಲಾತಿಯ ಬಗ್ಗೆ ಪರಿಶೀಲಿಸುವ ಹಕ್ಕು ಇರುತ್ತದೆ. 11) ಹೆಚ್ಚಿನ ವಿಷಯಗಳಿಗೆ ಕಛೇರಿಯ ವೇಳೆಯಲ್ಲಿ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ಅಥವಾ ಅಧ್ಯಕ್ಷರನ್ನು ಸಂಪರ್ಕಿಸಿ ಮಾಹಿತಿಯನ್ನು ಪಡೆಯಬಹುದು. 12) ಹರಾಜನ್ನು ಅಂಗೀಕರಿಸುವ/ತಿರಸ್ಕರಿಸುವ ಮರು ಹರಾಜು ಮಾಡುವ ವಿಶಿಷ್ಟ ಹಕ್ಕನ್ನು ಗ್ರಾಮ ಪಂಚಾಯ್ತಿ ಕಾಯ್ದಿರಿಸಿಕೊಂಡಿದೆ.

ವಿಶೇಷ ಸೂಚನೆ: ಅಂಗಡಿ ಮಳಿಗೆಗಳು ಬಿಡ್ ಆದ ನಂತರ ಪ್ರತಿ ಒಂದು ಮಳಿಗೆಗೆ ಶೇ.75 ರಷ್ಟು ಹಣ ಮುಂಗಡವಾಗಿ ಪಾವತಿ ಮಾಡುವುದು. ಮಿಕ್ಕ ಹಣ ಅಂಗಡಿ ಮಳಿಗೆ ತಮ್ಮ ಸುಬರ್ದಿಗೆ ತೆಗೆದುಕೊಳ್ಳುವಾಗ ಪಾವತಿಸಿ ಗ್ರಾಮ ಪಂಚಾಯ್ತಿ ಅಧಿಕಾರಿಗಳಿಂದ ರಸೀತಿ ಪಡೆಯತಕ್ಕದ್ದು.

ಶ್ರೀಮತಿ ನಾಗರತ್ನ ಕೆ.	**ಶ್ರೀ ಲೋಕೇಶ್ ಹೆಚ್.ಬಿ.**	**ಶ್ರೀಮತಿ ಕೆ.ಎಂ. ಪಂಕಜ**	**ಶ್ರೀ ಎಸ್.ಮಂಜಣ್ಣ**
ಅಧ್ಯಕ್ಷರು, ಗ್ರಾ.ಪಂ. ಮಲ್ಲಸಂದ್ರ	ಉಪಾಧ್ಯಕ್ಷರು, ಗ್ರಾ.ಪಂ. ಮಲ್ಲಸಂದ್ರ	ದ್ವಿ.ದರ್ಜೆ ಲೆಕ್ಕ ಸಹಾಯಕರು ಗ್ರಾ.ಪಂ. ಮಲ್ಲಸಂದ್ರ	ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗ್ರಾ.ಪಂ. ಮಲ್ಲಸಂದ್ರ